# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.</u>

## ಸಿ.ಸಿ. ಸಂಖ್ಯೆ: 144/18

**ಸಾಕ್ಷಿಯನ್ನು ದಿಃ 07.02.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಆರ್ ಕೆ ಯೋಗೇಶ್ | ಸಿ.ಡಬ್ಲ್ಯೂಃ 10 ಪಿ.ಡಬ್ಲ್ಯೂಃ 2 |
| ತಂದೆಯ ಹೆಸರು | ಲೇಟ್ ಆರ್ ಪಿ ಕಾಳೇಗೌಡ | |
| ವಯಸ್ಸು | 47 ವರ್ಷ | |
| ಕೆಲಸ | ಮುಖ್ಯಪೇದೆ-285<br>ಹುಣಸೂರು ಪಟ್ಟಣ ಠಾಣೆ | |
| ವಾಸಸ್ಥಳ | ಹುಣಸೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ನಾನು ದಿಃ 03.11.2010 ರಿಂದ ಬಿಳಿಕೆರೆ ಠಾಣೆಯಲ್ಲಿ ಮುಖ್ಯಪೇದೆ ಆಗಿ ಕರ್ತವ್ಯ ನಿರ್ವಹಿಸಿದ್ದು ಆ ಸಮಯ 2010 –2013 ರವರೆಗೆ ನನ್ನನ್ನು ಬಿಳಿಕೆರೆ ಠಾಣೆಯಿಂದ ಪೊಲೀಸ್ ವೃತ್ತ ನಿರೀಕ್ಷಕರು, ಹುಣಸೂರು ಇವರ ತನಿಖಾ ಸಹಾಯದ ಕರ್ತವ್ಯಕ್ಕಾಗಿ ಕರೆದುಕೊಂಡು ಬಂದಿರುತ್ತಾರೆ.

ದಿಃ 28.02.2013 ರಂದು ಬೆಳಿಗ್ಗೆ 7 ರ ಸಮಯ ನಾನು ಕಛೇರಿಯಲ್ಲಿ ಇದ್ದಾಗ ಚಾಸಾ–16 ರವರು ಹುಣಸೂರು ಪಟ್ಟಣ ಠಾಣೆಯಲ್ಲಿ ದಾಖಲಾಗಿದ್ದ ಮೊ.ಸಂ.40/2013 ರಲ್ಲಿ ಕಲಂ 153 ಎ, 295 ಎ,292 ಐಪಿಸಿ ಸಹ ಕಲಂ 67 ಐ ಟಿ ಆಕ್ಟ್–2000 ಪ್ರಕರಣದಲ್ಲಿ ಆರೋಪಿ ಸೆಂದಿಲ್ ಕುಮಾರ್ ಪತ್ತೆ ಬಗ್ಗೆ ನನ್ನನ್ನು , ಚಾಸಾ–12,8,9 ರವರನ್ನು ಕರೆದುಕೊಂಡು ಇಲವಾಲಕ್ಕೆ ಹೋಗಿ ಅಲ್ಲಿ ಚಾಸಾ–14 ರವರನ್ನು ಕರೆದುಕೊಂಡು ಮೈಸೂರು ಕಡೆ ಗಸ್ತು ಮಾಢಿ ಮಂಡ್ಯದಲ್ಲಿ ಗಸ್ತು ಮಾಡುತ್ತಿದ್ದಾಗೆ ಪ್ರಕರಣದ ಆರೋಪಿ ಸೆಂದಿಲ್ ಕುಮಾರ್ ಅವರು ಮಂಡ್ಯ ಸಂಜಯ ಸರ್ಕಲ್ ನಲ್ಲಿ ಇರುವುದಾಗಿ ಬಾತ್ಮೀದಾರರಿಂದ ಮಾಹಿತಿ ಬಂದ ಮೇರೆಗೆ ನಾವುಗಳು ಬೆಳಿಗ್ಗೆ 10 ಗಂಟೆಗೆ ಹೋಗಿ ಆರೋಪಿ ಸೆಂದಿಲ್ ಕುಮಾರ್ ಹಿಡಿದು ನಂತರ ಚಾಸಾ–16 ರವರು ಆತನ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ವಿಚಾರಿಸಲಾಗಿ ತಾನು ದಿಃ 25.02.2013 ರಂದು ಮಧ್ಯಾಹ್ನ ಸುಮಾರು 12 ರ ಸಮಯ ತನ್ನ ಬಾಬ್ತು sandisendil.82@gmail.com ಫೇಸ್ಬುಕ್ ಐಡಿಯಲ್ಲಿ ಪಾಸ್ ವರ್ಡ್ 9738635112 ರಲ್ಲಿ USER NAME Sendilcool ಅನ್ನು open ಮಾಡಿಕೊಂಡಿದ್ದು ಅದರಲ್ಲಿ ತನ್ನ ಹಲವಾರು ಸ್ನೇಹಿತರು ಅಶ್ಲೀಲ ಸಂದೇಶಗಳು ಹಾಗೂ ಅಶ್ಲೀಲ ಚಿತ್ರಗಳನ್ನು ಕಳುಹಿಸಿದ್ದು ಅದರಲ್ಲಿ ತಾನು ನಾಮಾಜ್ ಮಾಡುವ ಮುಸ್ಲಿಂ ವ್ಯಕ್ತಿ ಮೇಲೆ ಹಂದಿ ಹತ್ತಿರುವ ಚಿತ್ರವನ್ನು ಮತ್ತು ಹಂದಿಯ ಮುಖಕ್ಕೆ ಮನುಷ್ಯ ಚಿತ್ರವಿರುವ

owesi ಅವರ ಚಿತ್ರವನ್ನು ಆಯ್ಕೆ ಮಾಡಿಕೊಂಡು ತನ್ನ ಫೇಸ್‌ಬುಕ್ ಮಿತ್ರರಿಗೆ ಹಂಚಿಕೊಂಡಿರುವುದಾಗಿ ತಿಳಿಸಿದ ಮೇರೆಗೆ ಸದರಿ ಅರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು ಚಾಸಾ–16 ರವರು ಮುಂದಿನ ಕ್ರಮ ಜರುಗಿಸಿರುತ್ತಾರೆ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಲ್ ಕೆ ಜೆ ವಕೀಲರಿಂದಃ</u>

ನಾನು ಈ ಹಿಂದೆ ಆರೋಪಿಯನ್ನು ಪ್ರಕರಣ ದಾಖಲಾಗುವ ಮೊದಲು ನೋಡಿರಲಿಲ್ಲ. ಆ ದಿನ ನಾವು ತನಿಖಾ ಕಾರ್ಯಕ್ಕೆ ಹೋದವರಲ್ಲಿ ಆರೋಪಿಯನ್ನು ಈ ಹಿಂದೆ ನೋಡಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. ಆದರೆ ಚಾಸಾ–16 ರವರು ಆರೋಪಿಯನ್ನು ಗುರುತಿಸಿ ಹಿಡಿದುಕೊಂಡಿರುತ್ತಾರೆ. ಆ ಸಮಯ ತನಿಖಾಧಿಕಾರಿಗಳು ಆರೋಪಿಯನ್ನು ಹಿಡಿದುಕೊಳ್ಳಲು ಹೇಳಿದ್ದರಿಂದ ನಾವು ಆರೋಪಿಯನ್ನು ಹಿಡಿದುಕೊಂಡಿರುತ್ತೇವೆ. ನಮ್ಮ ತನಿಖಾಧಿಕಾರಿಗಳು ಅಥವಾ ಸಿಬ್ಬಂದಿಗಳು ಆರೋಪಿಯ ಗುರುತು–ಚಹರೆ ಇರುವ ಫೋಟೋ ಇಟ್ಟುಕೊಂಡಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. ತನಿಖಾಧಿಕಾರಿಗಳು ಆರೋಪಿಯನ್ನು ಹಿಡಿದುಕೊಳ್ಳಲು ಹೇಳಿದ್ದರಿಂದ ನಾವು ಆರೋಪಿಯನ್ನು ಹಿಡಿದುಕೊಂಡಿರುತ್ತೇವೆ.

ಆ ದಿನ ನಾವು ಹುಣಸೂರಿನಿಂದ ಬೆಳಿಗ್ಗೆ 7 ಕ್ಕೆ ಹೊರಟಿರುತ್ತೇವೆ. ಮೈಸೂರಿನಲ್ಲಿ Sub–urban Bus–stand, ನಜರ್ಬಾದ್ ಹಾಗೂ ಲಷ್ಕರ್ ಮೊಹಲ್ಲಾ ಕಡೆಗಳಲ್ಲಿ ಗಸ್ತು ಮಾಡಿ ನಂತರ ಮಂಡ್ಯಕ್ಕೆ ಹೊರಟಿರುತ್ತೇವೆ. ಮೈಸೂರಿನಲ್ಲಿ ನಾವು 8 ರಿಂದ 9 ಗಂಟೆವರೆಗೆ ಗಸ್ತು ಮಾಡಿರುತ್ತೇವೆ. Sub–urban Bus–stand, ನಜರ್ಬಾದ್ ಹಾಗೂ ಲಷ್ಕರ್ ಮೊಹಲ್ಲಾ ಒಂದಕ್ಕೊಂದು 8 ಕಿ.ಮೀ.ಅಂತರದಲ್ಲಿವೆ ಎಂದರೆ ಸರಿಯಲ್ಲ. ಗ್ರಾಮಾಂತರ ಠಾಣೆಯಿಂದ ಹೋದರೆ 1 ಕಿ.ಮೀ. ಆಗುತ್ತದೆ ಹಾಗೂ ಅಲ್ಲಿಂದ 3 ಕಿ.ಮೀ.ಅಂತರವಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಲಷ್ಕರ್ ಮೊಹಲ್ಲಾ ಹಾಗೂ ನಜರ್ಬಾದ್ನಲ್ಲಿ ನಾವು ಯಾವ ಯಾವ ಸ್ಥಳಗಳಲ್ಲಿ ಹುಡುಕಾಟ ಮಾಡಿದೇವು ಈಗ ನನಗೆ ನೆನಪಿಲ್ಲ. ಆ ಸಮಯ ಚಾಸಾ–16 ರವರು ನಮ್ಮನ್ನು ಕರೆದುಕೊಂಡು ಹೋಗಿದ್ದಕ್ಕೆ ನಾವು ಹೋಗಿದ್ದೇವು.

ಆರೋಪಿಯನ್ನು ದಸ್ತಗಿರಿ ಮಾಡಿದ ಮಂಡ್ಯ ಸಂಜಯ–ಸರ್ಕಲ್ ನಲ್ಲಿ ಮಹಜರ್ ಕ್ರಮ ಜರುಗಿಸಿಲ್ಲ. ಆದರೆ ಅಲ್ಲಿ ದಸ್ತಗಿರಿ ಕ್ರಮ ಜರುಗಿಸಿ ಆರೋಪಿ ಸ್ವಇಚ್ಛಾ–ಹೇಳಿಕೆ ಪಡೆದಿರುತ್ತೇವೆ. ಆರೋಪಿ ದಸ್ತಗಿರಿ ಜರುಗಿಸಿದ್ದಕ್ಕೆ ನಾವು ಬರವಣಿಗೆ ಮಾಡಿ ಸಾಕ್ಷಿಯ ಸಹಿ ಪಡೆದಿರುತ್ತಾರೋ ಇಲ್ಲವೋ ನನಗೆ ನೆನಪಿಲ್ಲ. ನಾವು ಆರೋಪಿಯನ್ನು ಮೈಸೂರಿನಲ್ಲಿ ಅಥವಾ ಮಂಡ್ಯದಲ್ಲಾಗಲಿ ದಸ್ತಗಿರಿ ಮಾಡಿಲ್ಲ. ನಾವು ಆರೋಪಿಯನ್ನು ಅವರ ಮನೆಯಾದ ಹುಣಸೂರಿನಲ್ಲಿ ದಸ್ತಗಿರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿ ತನ್ನ ಕಂಪ್ಯೂಟರ್ ಸೆಂಟರ್ ನಿಂದ ಮನೆಗೆ ಬಂದು ವಿಶ್ರಾಂತಿ ಪಡೆಯುವಾಗ ನಾವು ಆತನಿಗೆ ಯಾವುದೇ ಮಾಹಿತಿ ನೀಡದೆ ನಾವು ನೇರವಾಗಿ ಆತನನ್ನು ದಸ್ತಗಿರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾವು ದಸ್ತಗಿರಿ ಮಾಡುವಾಗ ನಾವು ಫೋಟೋವನ್ನು ತೆಗಿದಿರುತ್ತಿರಾ ಎಂಬ ಪ್ರಶ್ನೆಗೆ ಅದು ತನಿಖಾಧಿಕಾರಿ ತೆಗೆಯಬೇಕು ನಾವು ತನಿಖಾಧಿಕಾರಿ ಆದೇಶದ ಮೇರೆಗೆ ಆರೋಪಿಯನ್ನು ದಸ್ತಗಿರಿ ಮಾಡಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ನಾವು ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಆತ ನಮ್ಮ ಬಳಿ ಯಾವುದೇ ಸ್ವಇಚ್ಛಾ ಹೇಳಿಕೆ ನೀಡಿಲ್ಲ, ಅದನ್ನು ನಾವು ಪ್ರಕರಣಕ್ಕೆ ಅನುಕೂಲವಾಗಲೆಂದು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿ ದಸ್ತಗಿರಿ ಸಮಯದಲ್ಲಿ ಹುಣಸೂರಿನ ನಗರಸಭೆ ಚುನಾವಣೆ ನಡೆಯುತ್ತಿತ್ತು ಎಂದರೆ ಇರಬಹುದು ನನಗೆ ನೆನಪಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಚುನಾವಣೆ ಸಮಯ ಆದ್ದರಿಂದ ಆರೋಪಿಯ ವಾಸ ಸ್ಥಳದಲ್ಲಿ ಚುನಾವಣೆಗೆ ನಿಲ್ಲುವ ಅಭ್ಯರ್ಥಿ ಸ್ಥಾನಕ್ಕೆ ನಿಲ್ಲುವ ಪ್ರಬಲ ಆಕಾಂಕ್ಷಿ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಚುನಾವಣೆಗೆ ಸ್ಪರ್ಧಿಸುವುದನ್ನು ತಪ್ಪಿಸಲು ಈ ರೀತಿ ಆತನ ವಿರುದ್ಧ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಯಾವುದೇ ಆರೋಪಗಳು ಇಲ್ಲದೆ ಇದ್ದರು ಆತನನ್ನು ಬಂಧಿಸಿ ನಾವು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.